<u>ಸಾಕ್ಷಿಯನ್ನು ದಿನಾಂಕ **09-02-2026** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

**<u>ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಯ ಪರ ಶ್ರೀ ಎಸ್ ಕೆ ಡಿ ವಕೀಲರಿಂದಃ</u>**

ನಿಪಿ-111 ಅನ್ನು ಪೂರೈಸುವಂತೆ ಯಾರು ಅರ್ಜಿ ಕೊಟ್ಟಿದ್ದಾರೆ ಎಂಬ ಬಗ್ಗೆ ಆ ದಾಖಲೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-111 ರ ಎಲ್ಲಾ ಬರಹಗಳು ಗಣಕೀಕೃತ ರೂಪದಲ್ಲಿ ಇರುತ್ತವೆ, ಆದರೆ ದಿನಾಂಕ ಮಾತ್ರ ಪೆನ್ನಿನಿಂದ ಬರೆಯಲಾಗಿದೆ ಎಂದರೆ ಸರಿ. ನಿಪಿ-111 ಅನ್ನು ಪೂರೈಸುವಂತೆ ನಾನೇ ಅರ್ಜಿ ಕೊಟ್ಟಿದ್ದೇನೆ ಎಂದು ಅದರಲ್ಲಿ ನಮೂದು ಇಲ್ಲ ಎಂದರೆ ಸರಿ. ನಿಪಿ-111 ಅನ್ನು ಯಾವ ಕಡತ ಅಥವಾ ಯಾರ ರಿಜಿಸ್ಟರ್ ಅನ್ನು ನೋಡಿ ಪೂರೈಸಲಾಗಿದೆ ಎಂದು ಅದರಲ್ಲಿ ನಮೂದಿಸಲಾಗಿಲ್ಲ ಎಂದರೆ ಸರಿ. ನಿಪಿ-111 ಅನ್ನು ಪೂರೈಸಲು ಮತ್ತು ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡುತ್ತೇವೆ ಎಂದು ನಾವು ನಮ್ಮ ಅರ್ಜಿಯಲ್ಲಿ ಬರೆದಿದ್ದೆವು. ನಿಪಿ-111 ಅನ್ನು ಪೂರೈಸುವ ಮೊದಲು ಪ್ರತಿವಾದಿಗಳಿಗೆ ಸಂಘದವರು ಲಿಖಿತ ನೊಟೀಸು ಕೊಟ್ಟಿದ್ದರು ಎನ್ನುವುದು ಗೊತ್ತಿಲ್ಲ ಮತ್ತು ಅದನ್ನು ಪೂರೈಸುವ ಮೊದಲು ಸಂಘದವರು ಸ್ಥಳ ಪರಿಶೀಲನೆ ಮಾಡಿ ಪಂಚನಾಮೆ ಮಾಡಿದ್ದರು. ಆ ಪಂಚನಾಮೆಯನ್ನು ನಿಪಿ-111 ರ ಜೊತೆಗೆ ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನಿಪಿ-111 ರಲ್ಲಿ ದಾವಾ ಆಸ್ತಿಯ ಅಳತೆ ಅಥವಾ ಚೆಕ್ಕುಬಂದಿ ನಮೂದಿಸಿಲ್ಲ. ನಾವು ಮತ್ತು ಸಂಘದವರು ಸೇರಿ ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ನಿಪಿ-111 ಅನ್ನು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಕೊಟ್ಟು, ನಾನು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-111 ಕ್ಕೂ ಮತ್ತು ಈ ಕೇಸಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇರುವುದಿಲ್ಲ.</u>**

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಜಿ. ಬಿ. ಹಳ್ಳಾಕಾಯಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.